www.ecourtsindia.com

## ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜಗಳೂರು.

**ಸಿ.ಸಿ. ನಂಃ 3/2024**

| ಫಿರ್ಯಾದುದಾರರು | ವಿರುದ್ದ | ಆರೋಪಿ |
|---|---|---|
| ಬಿಳಚೋಡು ಪೊಲೀಸ್ ಠಾಣೆ. | | ಶ್ರೀ.ಮಂಜುನಾಥ ಪಿ ತಂದೆ ಪಾಲಪ್ಪ, 30 ವರ್ಷ, ಚಾಲಕ, ವಾಸಃ ಕೆಎ.16.ಬಿ.5265 ಅಮರೇಶ್ವರ ಬಸ್ಸಿನ ಚಾಲಕ, ಬಿಳಚೋಡು ಗ್ರಾಮ, ಜಗಳೂರು ತಾಲ್ಲೂಕು, ದಾವಣಗೆರೆ |

**ಆಪಾದನೆ**

ದಿನಾಂಕ 03/05/2023 ರಂದು ಸಾಯಂಕಾಲ 5:30 ಗಂಟೆ ಸಮಯದಲ್ಲಿ ಬಿಳಚೋಡು ಪೊಲೀಸ್ ಠಾಣಾ ಸರಹದ್ದಿನ ಜಗಳೂರು ತಾಲ್ಲೂಕು ಮಾದನಹಳ್ಳಿ ಕ್ರಾಸಿನಿಂದ ಸ್ವಲ್ಪ ಮುಂದೆ ಬಿಳಚೋಡು ಗ್ರಾಮದ ವಾಸಿ ಪಾರ್ಶ್ವನಾಥ ಇವರ ಜಮೀನಿನ ಮುಂದು ಹಾದು ಹೋಗಿರುವ ಜಗಳೂರು ದಾವಣಗೆರೆ ರಸ್ತೆಯಲ್ಲಿ ದಾವಣಗೆರೆ ಕಡೆಯಿಂದ ಹೋಗುತ್ತಿರುವಾಗ, ಆರೋಪಿಯಾದ ನೀವು ಕೆಎ-16/ಬಿ.5265 ನೇ ಅಮರೇಶ್ವರ ಖಾಸಗಿ ಬಸ್ಸನ್ನು ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿ ಜಗಳೂರು ಕಡೆಯಿಂದ ಹೋಗುತ್ತಿದ್ದ ಕೆಎ.17/ಎಂ.6736 ನೇ ಮಾರುತಿ ಅಲ್ಟೋ ಕಾರಿಗೆ ಅಪಘಾತಪಡಿಸಿರುತ್ತೀರಿ, ಆದ್ದರಿಂದ ನೀವು ಭಾ.ದಂ.ಸಂ. ಕಲಂ 279 ರಡಿಯಲ್ಲಿ ಅಪರಾಧ ಮಾಡಿದ್ದೀರೆಂದು ಆಪಾದಿಸಲಾಗಿದೆ.

ಎರಡನೆಯದಾಗಿ, ಮೇಲೆ, ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನಿಮ್ಮ ತಪ್ಪಿನಿಂದಾದ ಸದರಿ ಅಪಘಾತದಲ್ಲಿ ಚಾಸಾ.02 ರವರ ತಲಗೆ, ಮೈಕೈಗೆ ಹಾಗೂ ಚಾಸಾ.3 ರವರ ತಲೆಗೆ, ಎಡಭಾಗದ ಎದೆ ಹತ್ತಿರ, ಎಡಕೈಯ ಮಧ್ಯದ ಬೆರಳಿಗೆ ಪೆಟ್ಟುಬಿದ್ದು ಸಾಮಾನ್ಯ ಸ್ವರೂಪದ ಗಾಯಪಡಿಸಿರುತ್ತೀರಿ, ಆದ್ದರಿಂದ ನೀವು ಭಾ.ದಂ.ಸಂ. ಕಲಂ 337 ರಡಿಯಲ್ಲಿ ಅಪರಾಧ ಮಾಡಿದ್ದೀರೆಂದು ಆಪಾದಿಸಲಾಗಿದೆ.

This is a True Copy of the Court Records Online. Authenticated @ districts.ecourtsindia.com/cnr/KADG620030252023/truecopy/order-1.pdf

ಮೂರನೆಯದಾಗಿ, ಮೇಲೆ, ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನಿಮ್ಮ ತಪ್ಪಿನಿಂದಾದ ಸದರಿ ಅಪಘಾತದಲ್ಲಿ ಚಾಸಾ.5 ರವರಿಗೆ ಎರಡೂ ಮೊಣಕಾಲಿನ ಕೆಳಭಾಗದಲ್ಲಿ ಪೆಟ್ಟುಬಿದ್ದು ತೀವ್ರ ಸ್ವರೂಪದ ಗಾಯಪಡಿಸಿರುತ್ತೀರಿ, ಆದ್ದರಿಂದ ನೀವು ಭಾ.ದಂ.ಸಂ. ಕಲಂ 338 ರಡಿಯಲ್ಲಿ ಅಪರಾಧ ಮಾಡಿದ್ದೀರೆಂದು ಆಪಾದಿಸಲಾಗಿದೆ.

ಕೊನೆಯದಾಗಿ, ಮೇಲೆ, ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿಯಾದ ನಿಮ್ಮ ತಪ್ಪಿನಿಂದ ಸದರಿ ಅಪಘಾತದಲ್ಲಿ, ಅಪಘಾತಕ್ಕೀಡಾದ ವಾಹನದ ಚಾಲನೆ ಮಾಡುತ್ತಿದ್ದ ಅರುಣಾಚಲ ಶೆಟ್ಟಿ ಇವರ ತಲೆಗೆ ತೀವ್ರವಾದ ಪೆಟ್ಟುಬಿದ್ದು ರಕ್ತಗಾಯಗಳಾಗಿ ಸ್ಥಳದಲ್ಲೇ ಮೃತಪಟ್ಟಿದ್ದು ಹಾಗೂ ಚಾಸಾ.4 ರವರ ತಲೆಗೆ, ಬಲಗೈಗೆ ಪೆಟ್ಟುಬಿದ್ದು ತೀವ್ರ ಸ್ವರೂಪದ ಗಾಯಗಳಾಗಿ ರಕ್ತಸ್ರಾವಾಗಿದ್ದರಿಂದ ಜಗಳೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿದ್ದು ನಂತರ ಹೆಚ್ಚಿನ ಚಿಕಿತ್ಸೆ ಕುರಿತಂತೆ ದಾವಣಗೆರೆಯ ಸಿಜಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಗೆ ದಾಖಲು ಮಾಡಿದಾಗ ಅದೇ ರಾತ್ರಿ 8:27 ಗಂಟೆ ಸಮಯಕಕ್ಷ್ ವೈದ್ಯರು ಪರೀಕ್ಷಿಸಿ ಮಾರ್ಗ ಮಧ್ಯದಲ್ಲೇ ಮೃತರಾಗಿರುತ್ತಾರೆ ಎಂದು ತಿಳಿಸಿದ್ದು, ಆದ್ದರಿಂದ ನೀವು ಭಾ.ದಂ.ಸಂ. ಕಲಂ 304(ಎ) ರಡಿಯಲ್ಲಿ ಅಪರಾಧ ಮಾಡಿದ್ದೀರೆಂದು ಆಪಾದಿಸಲಾಗಿದೆ.

ದಿನಾಂಕ 11/06/2024.

**ದಿ.ನ್ಯಾ. ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಜಗಳೂರು.**

This is a True Copy of the Court Records Online. Authenticated @ districts.ecourtsindia.com/cnr/KADG620030252023/truecopy/order-1.pdf

**<u>ಆರೋಪಿಯ ಹೇಳಿಕೆ</u>**

ಪ್ರಶ್ನೆಃ ಈಗ ಓದಿ ಹೇಳಿದ ನಿಮ್ಮ ಮೇಲಿನ ಆಪಾದನೆ ತಿಳಿಯಿತೇ ?

ಉತ್ತರಃ

ಪ್ರಶ್ನೆಃ ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ನಡೆಯಬೇಕೆ ?

ಉತ್ತರಃ

(ಆಪಾದನೆ ಮತ್ತು ಆರೋಪಿಯ ಹೇಳಿಕೆಯನ್ನು ಆರೋಪಿಗೆ ತಿಳಿದ ಹಿಂದಿ ಭಾಷೆಯಲ್ಲಿ ಭಾಷಾಂತರಿಸಿ ನನ್ನ ಸಮಕ್ಷಮದಲ್ಲಿ ತೆಗದುಕೊಂಡಿದ್ದು ಸದರಿ ಹೇಳಿಕೆಯು ಆರೋಪಿಯು ನೀಡಿದ ನಿಜವಾದ ಹೇಳಿಕೆ ಇರುತ್ತದೆ)

ದಿನಾಂಕ:11/06/2023.

**ದಿ.ನ್ಯಾ. ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿಗಳು,**

**ಜಗಳೂರು.**

This is a True Copy of the Court Records Online. Authenticated @ districts.ecourtsindia.com/cnr/KADG620030252023/truecopy/order-1.pdf

www.ecourtsindia.com